ರಾಷ್ಟ್ರೀಯ ಕ್ರೀಡೆಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತವೆಂದು ತಿಳಿದು ಬಂದಿದೆ. ಮಾನ್ಯ ಸಚಿವರು ಆ ಜಾಗಕ್ಕೆ ಹೋದಾಗ ನೋಡಬಹುದು, ಆ ರಾಷ್ಟ್ರೀಯ ಕ್ರೀಡೆಗಳು ನಡೆಯುವ ಅವಧಿಯಲ್ಲಿ ಸುಮಾರು ಎಷ್ಟು ವಾಹನಗಳು ಬರಬಹುದು? ಇದರ ಬಗ್ಗೆ ಬೆಂಗಳೂರು ನಗರ ಸಂಚಾರಿ ಪೋಲೀಸರ ಜೊತೆಯಲ್ಲಿ ವಿಚಾರ ಮಾಡಿದ್ದೀರಾ? ಪತ್ರಿಕೆಗಳಲ್ಲಿ ನೋಡಿರುವ ಪ್ರಕಾರ ಕಬ್ಬನ್ ಪಾರ್ಕಿನಲ್ಲಿ ವೆಹಿಕಲ್ಸನ್ನು ಪಾರ್ಕಿಂಗ್ ಮಾಡುವುದಕ್ಕೆ ಯೋಜನೆ ಮಾಡಿದ್ದೀರಿ ಎಂದು ತಿಳಿದು ಬಂದಿದೆ. ಕ್ರೀಡಾಂಗಣವನ್ನು ಮಾಡಿದ ಮೇಲೆ ಅಲ್ಲಿಗೆ ಬರತಕ್ಕ ವೆಹಿಕಲ್ಸನ್ನು ಎಲ್ಲಿ ನಿಲ್ಲಿಸಲು ವ್ಯವಸ್ಥೆ ಮಾಡುತ್ತೀರಿ?

ಶ್ರೀ ಅಜಯಕುಮಾರ್ ಸರ್‌ನಾಯಕ್:- ಈ ಕ್ರೀಡೆಗಳನ್ನು ನಡೆಸುವ ಸಂದರ್ಭದಲ್ಲಿ ಈಗಿನ ಕಂಠೀರವ ಸ್ಟೇಡಿಯಂ ಪಕ್ಕದಲ್ಲಿ ಇನ್ನೊಂದು ಇನ್‌ಡೋರ್ ಸ್ಟೇಡಿಯಂನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಆ ಸಂದರ್ಭದಲ್ಲಿ ಪಾರ್ಕಿಂಗ್‌ಗೆ ಸ್ವಲ್ಪ ತೊಂದರೆ ಆಗಬಹುದು. ಆದರೆ ಆ ಸಂದರ್ಭದಲ್ಲಿ ಬ್ರಿಗೇಡ್ ರೋಡ್‌ನಲ್ಲಿರುವ ಪರೇಡ್ ಗ್ರೌಂಡ್‌ನಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ.

ವಿಷಯ:- ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯನ್ನು ಸೆರ್ವಖತು ಬಂದರಾಗಿ ಪರಿವರ್ತನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 21(215)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕರ್ನಾಟಕ ರಾಜ್ಯದಲ್ಲಿರುವ ಸರ್ವಖತು ಬಂದರುಗಳಾವುವು?

ಆ) ಕುಂದಾಪುರ ತಾಲ್ಲೂಕು ಗಂಗೊಳ್ಳಿಯನ್ನು ಸರ್ವಖತು ಬಂದರನ್ನಾಗಿಸುವ ಯೋಜನೆಯನ್ನು ಸರಕಾರದವರು ಪರಿಶೀಲಿಸುವರೆ;

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಜಯಪ್ರಕಾಶ ಹೆಗಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು):-

ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಕಾರವಾರ ಬಂದರು ಮತ್ತು ಕೇಂದ್ರ ಸರ್ಕಾರದ ಅಧೀನದಲ್ಲಿರುವ ನವ ಮಂಗಳೂರು ಬಂದರು.

ಆ) ಇಂತಹ ಪ್ರಸ್ತಾವನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿದ್ದೇವೆ. ಅದರ ಜೊತೆಯಲ್ಲೇ ಇನ್ನೊಂದು ಕ್ಲಾರಿಫಿಕೇಶನನ್ನೂ ಕೊಟ್ಟರೆ ಅವರಿಗೆ ಸಮಾಧಾನವಾಗಬಹುದು. ಹಿಂದೆ ಒಮ್ಮೆ ಇದೇ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಒಂದು ಪ್ರಶ್ನೆಯನ್ನು ಕೇಳಿದ್ದರು. ಇದು ಬಂದರು ಇಲಾಖೆಗೆ ಸಂಬಂಧಪಟ್ಟಿದ್ದು ಎಂದು ಹೇಳಿದ್ದಾರೆ. ಹಿಂದೆ ಅವರು ಮೀನುಗಾರಿಕೆ ಇಲಾಖೆಗೆ

ಸಂಬಂಧಪಟ್ಟಂತೆ ಪ್ರಶ್ನೆಯನ್ನು ಅಲ್ಲಿ ಸರ್ವಋತು ಬಂದರನ್ನು ಮಾಡುತ್ತೇವೆಂದು ಉತ್ತರವನ್ನು ಕೊಟ್ಟಿದ್ದೆ. ವಾಣಿಜ್ಯ ಚಟುವಟಿಕೆಗಳ ಬಂದರಿನಲ್ಲಿ ನಾವು ಮಾಡುತ್ತಿಲ್ಲ. ಮೀನುಗಾರಿಕಾ ಬಂದರಿನಲ್ಲಿ ಸರ್ವಋತು ಬಂದರನ್ನು ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ನಾನು ಕೇಳಿರತಕ್ಕ ಪ್ರಶ್ನೆ ಎಂದರೆ ಸರ್ವ ಋತು ಬಂದರು ಎಂದರೆ ಯಾವುದು? ತಾವು ಮೀನುಗಾರಿಕಾ ಸಚಿವರೆಂಬ ದೃಷ್ಟಿಯಿಂದ ಮೀನುಗಾರಿಕಾ ಸರ್ವಋತು ಬಂದರು ಎಂದು ನಾನು ಪ್ರಶ್ನೆಯನ್ನು ಕೇಳಿಲ್ಲ. ಗಂಗೊಳ್ಳಿಯಲ್ಲಿ ಮಾಡುತ್ತೇವೆ ಎಂದು ಈಗ ತಾವು ಹೇಳಿದ್ದೀರಿ.

ಅಧ್ಯಕ್ಷರು:- ಕೇಂದ್ರ ಸರ್ಕಾರ ನಿಮ್ಮ ಕೈಯಲ್ಲಿದೆ, ನೀವು ಪ್ರಸ್ತಾಪ ಮಾಡಿ.

ಶ್ರೀ ಕೆ.ಜಯಪ್ರಕಾಶ ಹೆಗಡೆ:- ಇದರ ಬಗ್ಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕೋಸ್ಟಲ್ ಇಂಜಿನಿಯರಿಂಗನವರು ಪ್ರಿಲಿಮಿನರಿ ಸರ್ವೆ ಮಾಡಿದ್ದಾರೆ. ಫೈನಲ್ ರಿಪೋರ್ಟನ್ನು ಕೊಡುವಂತೆ ನಾವು ಕೇಳಿದ್ದೇವೆ. ಅದು ಬಂದ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ:- ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಅಧುನೀಕರಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 22(143ಎ)

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯನ್ನು ಸಮಗ್ರವಾಗಿ ಅಧುನೀಕರಣ ಮಾಡಲು ಸರ್ಕಾರದವರು ಯೋಚಿಸಿರುವರೇ?

ಆ) ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು? (ದರ್ಜಿವಾರು ವಿವರವನ್ನು ಒದಗಿಸುವುದು) .

ಶ್ರೀ ಎಂ.ಸಿ.ನಾಣಯ್ಯ(ವಾರ್ತಾ ಮತ್ತು ಪ್ರಚಾರ ಸಚಿವರು):-

(ಅ) ಹೌದು

(ಆ) ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ: 108, ದರ್ಜಿವಾರು ವಿವರ ಕೆಳಕಂಡಂತಿದೆ:

ಗುಂಪು 'ಎ' - 10 ಹುದ್ದೆಗಳು
ಗುಂಪು 'ಬಿ' - 2 ಹುದ್ದೆಗಳು
ಗುಂಪು 'ಸಿ' - 66 ಹುದ್ದೆಗಳು
ಗುಂಪು 'ಡಿ' - 30 ಹುದ್ದೆಗಳು

ಶ್ರೀ ವಾಟಾಳ್ ನಾಗರಾಜ್:- ಅವರ ಉತ್ತರದಲ್ಲಿ, ತಮ್ಮ ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂದರೆ 108 ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಇದು ಬಹಳ